a) ಲೋಹಗಳ ಶಾಬ್ದನ ಗುಣ ಎಂದರೇನು ?

b) ಉತ್ತಮ ಉಷ್ಣವಾಹಕಗಳಾದ ಎರಡು ಲೋಹಗಳನ್ನು ಹೆಸರಿಸಿ.

25. ಸೀಮೆಎಣ್ಣೆಯಲ್ಲಿ ಸಂಗ್ರಹಿಸಿಟ್ಟಂತಹ ಒಂದು ಲೋಹವನ್ನು ನೀರಿನಲ್ಲಿ ಹಾಕಿದಾಗ ಉತ್ಪತ್ತಿಯಾಗುವ ಅನಿಲವು ಹೊತ್ತಿಕೊಂಡು ಉರಿಯುತ್ತದೆ.

i) ಆ ಲೋಹವು ಯಾವುದು ?

ii) ಬಿಡುಗಡೆಯಾಗುವ ಅನಿಲ ಯಾವುದು ?

iii) ಬಿಡುಗಡೆಯಾದ ಅನಿಲ ತಕ್ಷಣ ಹೊತ್ತಿಕೊಂಡು ಉರಿಯುತ್ತದೆ. ಏಕೆ ?

26. ನೀರಿನಲ್ಲಿ ಆಮ್ಲೀಯ ದ್ರಾವಣವು ವಿದ್ಯುತ್ ಪ್ರವಹಿಸುವ ಉಪಕರಣಗಳ ಜೋಡಣೆಯ ಚಿತ್ರವನ್ನು ಬರೆಯಿರಿ.

27. a) ಇರುವೆ ಕಡಿತದಿಂದ ನೋವು ಮತ್ತು ಉರಿಗೆ ಕಾರಣವಾಗುವ ಆಮ್ಲವನ್ನು ಹೆಸರಿಸಿ.

b) ಆಮ್ಲ ಮಳೆಯ pH ಮೌಲ್ಯ ಎಷ್ಟು ?

28. ಕೆಟನೀಕರಣ ಎಂದರೇನು ? ಅದರ ಮೂರು ವಿಧಗಳನ್ನು ತಿಳಿಸಿ.

## ಭಾಗ – C

## ( ಜೀವ ವಿಜ್ಞಾನ )

**XII. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಒಂದು ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಡನೆ ಪೂರ್ಣ ಉತ್ತರವನ್ನು ಬರೆಯಿರಿ : $2 \times 1 = 2$**

33. ಕೆಳಗಿನವುಗಳಲ್ಲಿ ಜೈವಿಕ ವಿಘಟನೆಗೆ ಒಳಗಾಗುವ ವಸ್ತುಗಳನ್ನು ಮಾತ್ರ ಹೊಂದಿರುವ ಗುಂಪು,


 (A) ಸಗಣಿ, ಕಾಗದ, ಕೊಳೆತ ಹಣ್ಣು

 (B) ಕಾಗದ, ಪ್ಲಾಸ್ಟಿಕ್, ಚರ್ಮದ ಚೀಲ

 (C) ತರಕಾರಿ ಸಿಪ್ಪೆಗಳು, ಹುಲ್ಲು, ಗಾಜಿನ ಬಾಟಲಿ

 (D) ಮಾಂಸ, ಪ್ಲಾಸ್ಟಿಕ್ ತಟ್ಟೆ, ಪೇಪರ್ ಲೋಟ

34. ಕೊಟ್ಟಿರುವ ಬೀಜದಳದ ಚಿತ್ರದಲ್ಲಿ ಪ್ರಥಮ ಕಾಂಡ ಮತ್ತು ಪ್ರಥಮ ಮೂಲಗಳು ಕ್ರಮವಾಗಿ,




 (A) $Z$ ಮತ್ತು $X$ (B) $Y$ ಮತ್ತು $X$

 (C) $X$ ಮತ್ತು $Z$ (D) $Z$ ಮತ್ತು $Y$

